ಇ) ಇಲ್ಲದಿದ್ದಲ್ಲಿ ಸದರೀಯವರು ಪದಾರ್ಥಗಳನ್ನು ಬಿಡುಗಡೆಯಾಗುವುದಕ್ಕಿಂತ ಮುಂಚಿತವಾಗಿ ತೂಕ ಮಾಡುವ ವ್ಯವಸ್ಥೆ ಮಾಡಿದ್ದಾರೆಯೇ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ,—

ಅ) ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಚಿಲ್ಲರೆ ನ್ಯಾಯಬೆಲೆ ಅಂಗಡಿ ಹಾಗೂ ಸಹಕಾರ ಸಂಘಗಳಿಗೆ ಸೂಕ್ತ ತೂಕದ ಮೇರೆಗೆ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡುತ್ತಿದೆ.

ಆ) ಮೇಲಿನ ಉತ್ತರಕ್ಕೆ ಅನುಗುಣವಾಗಿ ನಷ್ಟದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಎಲ್ಲಾ ಸಗಟು ವ್ಯಾಪಾರ ನಿರ್ವಾಹಕರಿಗೂ ಆಹಾರ ಧಾನ್ಯಗಳನ್ನು ಬಿಡುಗಡೆಯ ಸಮಯ ದಲ್ಲಿ ತೂಕ ಮಾಡಿದ ನಂತರ ವಿತರಿಸಬೇಕೆಂದು ಆದೇಶಿಸಲಾಗಿದೆ.

ಸಭೆಯಲ್ಲಿ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರಿನ ಮುಂದೆ ಇರುವ ೧೯೫೧ನೇ ಇಸವಿಯ ಕರ್ನಾಟಕ ಆರ್ಥಿಕ ನಿಗಮಗಳ ಅಧಿನಿಯಮದ ೩೮ (೩) ನೇ ಕಲಮಿನ ಮೇರೆಗೆ .—ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ೧೯೮೬-೮೭ನೇ ಸಾಲಿನ ೨೮ನೇ ವಾರ್ಷಿಕ ವರದಿಯನ್ನು ಭಾರತದ ನಿಯಂತ್ರಕ ಹಾಗೂ ಆಡಿಟರ್ ಜನರಲ್‌ರವರ ವರದಿಯೊಂದಿಗೆ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಶ್ರೀ ಆರ್. ವಿ. ದೇಶಪಾಂಡೆ(ಕೃಷಿ ಮಂತ್ರಿ).— ಮಾನ್ಯ ಅಧ್ಯಕ್ಷರೇ, ೧೯೫೩ನೇ ಇಸವಿಯ ಹತ್ತಿ ಸಾಗಾಣಿಕೆ ಶಾಸನದ ೮ನೇ ಕಲಮಿನ ಮೇರೆಗೆ. ೧೯೮೭ನೇ ಇಸವಿಯ ಹತ್ತಿ ಸಾಗಾಣಿಕೆ (ಕರ್ನಾಟಕ ತಿದ್ದು ಪಡಿ) ನಿಯಮಾವಳಿಕ್ಕೆ ಸಂಬಂಧಿಸಿದಂತೆ ಎಎಚ್‌ಡಿ ೩೨೭ ಎಎಂಎಸ್ ೮೭ನೇ ಸಂಖ್ಯೆಯ ಕಂಡು ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ಕಾರ್ಯದರ್ಶಿಯವರಿಂದ ಕಾಗದ ಪತ್ರಗಳನ್ನು ಮುಂದಿಡುವುದು.

ಕಾರ್ಯದರ್ಶಿ.— ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ.

೧) ೧೯೮೭ ನೇ ಇಸವಿಯ ಕರ್ನಾಟಕ ವೃಕ್ಷ ಸಂರಕ್ಷಣಾ (ತಿದ್ದುಪಡಿ) ವಿಧೇಯಕ

೨) ೧೯೮೭ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವ ವಿದ್ಯಾನಿಲಯದ ಶಿಕ್ಷಕರ (ಹಂಗಾಮಿ ಉಪ ನ್ಯಾಸಕರ ವಿಲೀನೀಕರಣ) ವಿಧೇಯಕ.

೩) ೧೯೮೭ನೇ ಇಸವಿಯ ಹತ್ತಿ ಸಾಗಾಣಿಕೆ (ಕರ್ನಾಟಕ ತಿದ್ದು ಪಡಿ) ವಿಧೇಯಕ.

೪) ೧೯೮೭ನೇ ಇಸವಿಯ ಕರ್ನಾಟಕ ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ (ತಿದ್ದುಪಡಿ) ವಿಧೇಯಂಕ

Mr, spoaker. paper laid. ಈಗ ಮಾನ್ಯ ಶಿವನಂಜಪ್ಪನವರು, ಅರ್ಜಿಗಳನ್ನು ಒಪ್ಪಿಸುವುದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜೆ. ಎಸ್. ಶಿವನಂಜಪ್ಪ.— ಮಾನ್ಯ ಅಧ್ಯಕ್ಷರೇ, ಗುಬ್ಬಿ ತಾಲ್ಲೂಕಿನ ಕಲ್ಲೂರು ಹಾಗೂ ಚಿಕ್ಕ ಕಲ್ಲೂರಿನ ಮುಧ್ಯ ಹರಿಯುವ ಶಿಂಷಾ ನದಿಗೆ ಸೇತುವೆಯನ್ನು ಕಟ್ಟುವ ಬಗ್ಗೆ, ಹಾಗೂ ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯಲ್ಲಿ ಬಿ. ಹೆಚ್. ರಸ್ತೆಯಿಂದ ಕುಂದರಹಳ್ಳಿ ಮಾರ್ಗವಾಗಿ ಅದಲಗೆರೆ ವರೆಗೆ ರಸ್ತೆ ಹಾಗೂ ಸೇತುವೆಯನ್ನು ನಿರ್ಮಿಸುವ ಬಗ್ಗೆ ಅರ್ಜಿಗಳನ್ನು ಸದನಕ್ಕೆ ಒಪ್ಪಿಸುತ್ತೇನೆ.